**ಪ್ರಭಾಕರ ಶಿಶಿಲ**

ಕಲೆ: ವೆಂಕಟ್ರಮಣ ಭಟ್

# ಗೌಡ್ತಿ ಅಮ್ಮನ ಪ್ರೇಮ ಪ್ರಸಂಗ

ಗೌಡ್ತಿ ಅಮ್ಮ ಹಜಾರದಲ್ಲಿ ಕೂತು 'ಸುಧಾ' ವಾರಪತ್ರಿಕೆಯನ್ನು ತಿರುವಿ ಹಾಕುತ್ತಿದ್ದರು. ಪ್ರತಿದಿನ 'ಪ್ರಜಾವಾಣಿ', ವಾರಕ್ಕೊಮ್ಮೆ 'ಸುಧಾ', ತಿಂಗಳಿಗೊಮ್ಮೆ 'ಮಯೂರ' ಪತ್ರಿಕೆಗಳನ್ನು ತಪ್ಪದೆ ಓದುವುದು ಅವರ ಹವ್ಯಾಸ. ಮನೆಯ ಕಪಾಟು ತುಂಬಾ ಕಣ್ಣೀರ ಕೋಡಿ ಹರಿಸುವ ಕಾದಂಬರಿಗಳು, ವಿಶಾಲವಾದ ಎಸ್ಟೇಟು, ಮನೆ ಎದುರಿನ ಹೂದೋಟ, ಎರಡು ಡಾಬರ್ಮನ್ ನಾಯಿಗಳೇ ಅವರ ಆಸ್ತಿ. ಮನೆಯಲ್ಲಿರುವ ಜನರೆಂದರೆ ಅವರು ಮತ್ತು ಪತಿ ಪ್ರತಾಪಚಂದ್ರರು. ಕಳೆದ ಸುಮಾರು ಇಪ್ಪತ್ತೈದು ವರ್ಷಗಳಿಂದ ಸ್ವಲ್ಪವೂ ಬದಲಾಗದ ದಿನಚರಿ. ತೀರಾ ಬೇಸರವಾದಾಗ ಬೆಂಗಳೂರಿನ ಸ್ವಂತ ಮನೆಯಲ್ಲಿ ನಾಲ್ಕು ದಿನವಿದ್ದು ಮತ್ತೆ ಮೂಡಿಗೆರೆಗೆ ವಾಪಸಾಗಿ ದಿನಾ ಎಸ್ಟೇಟಿಗೆ ಒಂದು ಸುತ್ತು ಹಾಕುವುದು. ಈ ದಿನ ಯಾಕೋ ಎಸ್ಟೇಟು ಸುತ್ತುವುದು ಬೇಡವೆನಿಸಿ ಯಾವುದೋ ಒಂದು ಕತೆ ಓದತೊಡಗಿದಾಗ ಮೊಬೈಲು ರಿಂಗಣಿಸಿತು.

ಆನ್‌ನೋನ್ ನಂಬರ್! ಹಾಳಾದ್ದು ಯಾರೋ ಮಜಾ ತಗೊಳ್ಳುತ್ತಿದ್ದಾರೆ. ಅಂತಹ ನಂಬರ್ ಬಂದರೆ ಯಜಮಾನರೇ ಫೋನು ಎತ್ತಿಕೊಳ್ಳುತ್ತಿದ್ದರು. ಅನಾವಶ್ಯಕವಾಗಿ ಫೋನು ಮಾಡಿ ಜೀವ ತಿನ್ನುವವರಿಗೆ ಸಹಸ್ರನಾಮಾರ್ಚನೆ ಮಾಡುತ್ತಿದ್ದರು. ಅವರು ಚಿಕ್ಕಮಗಳೂರಿಗೆ ಹೋಗಿದ್ದಾರೆ. ಆನ್‌ನೋನ್ ನಂಬರಿಂದ ಬರುವ ಕರೆಗಳಿಗೆ ರಾಂಗ್ ನಂಬರ್ ಎಂದು ಹೇಳಿದರೂ ಹೆಣ್ಣಿನ ಸ್ವರ ಕೇಳಿದಾಗ ಸಂಭಾಷಣೆ ಮುಂದುವರಿಸುತ್ತಾರೆ. "ನಿಮ್ಮ ಸ್ವರ ಥೇಟ್ ಹದಿನಾರರ ತರುಣಿಯ ಸ್ವರದಂತಿದೆ" ಎಂದು ಎಲ್ಲರೂ ಹೇಳುತ್ತಿದ್ದರು. ಹದಿನಾರು! ತಮಗೀಗ ಅರವತ್ತಾರು! ಆದರೂ ಸ್ವರಕ್ಕೆ ಮನಸೋತು ಮಾತಾಡುವ ತೀಟೆಯವರ ಉಪಟಳ. ಮದುವೆಯಾದ ಹೊಸದರಲ್ಲಿ ಅಂತಹ ಕರೆಗಳು ಬಂದಾಗ ಕಿರಿಕಿರಿಯಾಗುತ್ತಿತ್ತು. ಈಗ ಅಭ್ಯಾಸವಾಗಿ ಹೋಗಿದೆ. ತೆಗೆದುಕೊಳ್ಳುವುದೋ ಬೇಡವೋ ಎಂದು ಮನಸ್ಸಿನ ತೊಳಲಾಟ. ಕೊನೆಗೆ ತೆಗೆದುಕೋ, ಏಕತಾನತೆ ನೀಗುತ್ತದೆ ಎಂದುಕೊಂಡು ಫೋನ್ ರಿಸೀವ್ ಮಾಡಿದರು.

ಅತ್ತಣಿಂದ ಅಪರಿಚಿತ ದನಿಯೊಂದು ಮೊಳಗಿತು. "ನೀವು ಮಂದಾಕಿನಿ ಪ್ರತಾಪಚಂದ್ರ ಅಲ್ಲವೇ?"

ಎಲಾ ಇವ್ನ! ಹೆಸರು ತಿಳ್ಕೊಂಡೇ ಫೋನ್ ಮಾಡ್ತಿದ್ದಾನೆ. ಕಲಿಸ್ತೀನಿ ಇವ್ನಿಗೆ.

"ನನ್ನ ಹೆಸರು ಕಟ್ಕೊಂಡು ನಿಮಗೇನಾಗ್ಬೇಕು? ಯಾಕಾಗಿ ಫೋನ್ ಮಾಡಿದ್ರಿ?"

"ಹಾಗಲ್ಲ ಮೇಡಂ. ನಾನು ರಾಂಗ್ ನಂಬರಿಗೆ ಫೋನು ಮಾಡಿದ್ದೀನಾ ಅಂತ ತಿಳಕೊಳ್ಳೋಕೆ."